**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**

**ಚಿಕ್ಕಬಳ್ಳಾಪುರ**

ವಿಶೇಷ ಸೆಷನ್ಸ್ ಕೇಸ್ 30/2025

ಪಿರ್ಯಾದುದಾರರು: ಕರ್ನಾಟಕ ಸರ್ಕಾರದ ಪರವಾಗಿ ಪೊಲೀಸ್ ಉಪಾಧೀಕ್ಷಕರು
ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ.

(ಪಾತಪಾಳ್ಯ ಪೋಲಿಸ್ ಠಾಣೆ)

**ವಿರುದ್ಧ**

ಆರೋಪಿ ಜಯಸುಧ

**ದೋಷಾರೋಪಣೆ**

ಕಾಂತರಾಜು ಎಸ್.ವಿ., ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಆದ ನಾನು ಈ ಪ್ರಕರಣದಲ್ಲಿ ಆರೋಪಿತಳಾದ

ಜಯಸುಧ
ಬಿನ್.ಲೇಟ್ ಪಾಳ್ಯಂ ವೆಂಕಟರಾಯಪ್ಪ
35 ವರ್ಷ, ವಾಸ ಗುಮ್ಮನಾಯಕನಪಾಳ್ಯ
ಬಾಗೇಪಲ್ಲಿ ತಾಲ್ಲೂಕು
ಚಿಕ್ಕಬಳ್ಳಾಪುರ.

ನಿಮ್ಮ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

**ಮೊದಲನೇಯದಾಗಿ,** ಪಾತಪಾಳ್ಯ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಡುವ ಚಿಕ್ಕಪುಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕು, ಗುಮ್ಮನಾಯಕನಹಳ್ಳಿ ಗ್ರಾಮದ ಆರೋಪಿ ಜಯಸುಧ ಹಾಗೂ ಸಾಕ್ಷಿ-7 ನಂಜುಂಡೇಶ್ವರರವರಿಗೂ ಮನೆಯ ಪಕ್ಕದ ರಸ್ತೆಯ ವಿಚಾರದಲ್ಲಿ

ತಕರಾರುಗಳು ಇದ್ದು ಆ ವಿಚಾರವಾಗಿ ಸಾಕ್ಷಿ-7 ರವರು ಆರೋಪಿಯಾದ ನೀವು ನಿಮ್ಮ ವಿರುದ್ಧ ಪಾತಪಾಳ್ಯ ಪೊಲೀಸ್ ಠಾಣೆಯಲ್ಲಿ ಪೋನು ಮುಖಾಂತರ ತಿಳಿಸಿದ್ದ ವಿಚಾರಕ್ಕಾಗಿ ದಿನಾಂಕ 19.08.2025 ರಂದು ಮಧ್ಯಾಹ್ನ 12.30 ಗಂಟೆಗೆ ಸ್ಥಳಕ್ಕೆ ಸಾಕ್ಷಿ-5 ಯಲಗುರೇಶ್ ಮತ್ತು ಸಾಕ್ಷಿ-6 ರಮೇಶ್ ರವರುಗಳು ಭೇಟಿ ನೀಡಿದಾಗ ನಾಯಕ ಜನಾಂಗಕ್ಕೆ ಸೇರಿದ ಸಾಕ್ಷಿ-1- ಪೆದ್ದನರಸಿಂಹಪ್ಪ ರವರಿಗೆ ಆರೋಪಿತೆಯಾದ ನೀವು ಅವರನ್ನು ಗುರಾಯಿಸಿ ನೋಡಿ, ತೆಲುಗು ಭಾಷೆಯಲ್ಲಿ ಲೇ ಬಾಯಿ ನಾ ಕೊಡುಕಾ ನಾಕು ನ್ಯಾಯಂ ಚೇಸ್ತಾವ ಎಂತ ಧೈರ್ಯಂ ರಾ ಸನ್ನ ನಾ ಕೊಡುಕಾ ಎಂದು ಜಾತಿ ನಿಂದನೆ ಮಾಡಿ, ಹಸು ಸಗಣಿಯನ್ನು ತನ್ನ ಮುಖಕ್ಕೆ ಹಾಗೂ ದೇಹಕ್ಕೆ ಹಾಕಿ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ದೃಷ್ಟಿಗೆ ಬೀಳುವ ಹಾಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯಿದೆ ಕಲಂ.3(1)(**r**) ರಡಿಯಲ್ಲಿ ಆರೋಪಿತಯಾದ ನೀವು ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಎರಡನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರು ಪರಿಶಿಷ್ಟ ಪಂಗಡದ ನಾಯಕ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದರೂ ಸಹ ಅವರಿಗೆ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ದೃಷ್ಟಿಗೆ ಬೀಳುವ ಹಾಗೆ ಉದ್ದೇಶಪೂರ್ವಕವಾಗಿ ಅವರ ಜಾತಿ ಹೆಸರು ಹಿಡಿದು ಬೈದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯಿದೆ ಕಲಂ.3(1)(**s**) ರಡಿಯಲ್ಲಿ

ಆರೋಪಿಯಾದ ನೀವು ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಮೂರನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕವಾಗಿ ನಿಂದಿಸಿ ಈ ಮೂಲಕ  ಭಾರತೀಯ ನ್ಯಾಯಾ ಸಂಹಿತೆಯ 352 ಕಲಂನ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ನಾಲ್ಕನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು  ಹಸು ಸಗಣೆಯನ್ನು ತನ್ನ ಮುಖಕ್ಕೆ ಹಾಗೂ ದೇಹಕ್ಕೆ ಹಾಕಿ ನಿನ್ನನ್ನು ಮುಗಿಸಿಬಿಡುತ್ತೇನೆ ಪ್ರಾಣ ಬೆದರಿಕೆ ಹಾಕಿ, ಹಲ್ಲೆ ನಡೆಸಲು ಮುಂದದಾಗ ತಮ್ಮ ಗ್ರಾಮದ ಚಾಸಾ-3-ಹರೀಶ ಮತ್ತು ಚಾಸಾ-4-ಅನಿಲ ರವರು ಬಿಡಿಸಿ ರಕ್ಷಣೆ ಮಾಡಿರುತ್ತಾರೆ ಈ ಮೂಲಕ  ಭಾರತೀಯ ನ್ಯಾಯಾ ಸಂಹಿತೆಯ 351(2)  ಕಲಂನ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಐದನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ  ಆರೋಪಿಯಾದ ನೀವು ಸಗಣೆಯಿಂದ ಸಾಕ್ಷಿ-1 ರವರ ಮುಖಕ್ಕೆ, ಮೈಮೇಲೆ ಎರಚಿ ಅವಮಾನವನ್ನುಂಟು ಮಾಡಿ ಈ ಮೂಲಕ  ಭಾರತೀಯ ನ್ಯಾಯಾ ಸಂಹಿತೆಯ 133 ಕಲಂನ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಕೊನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸವರ್ಣಿಯ ಬೆಸ್ತ ಜನಾಂಗಕ್ಕೆ ಸೇರಿದ ಆರೋಪಿಯಾದ ನೀವು, ಚಾಸಾ 1 ರವರು ಪರಿಶಿಷ್ಟ ಪಂಗಡದ ನಾಯಕ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದರೂ ಸಹ, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ಷೆಡ್ಯೂಲ್ ನಲ್ಲಿ ಕಾಣಿಸಿದ ಭಾರತೀಯ ದಂಡ ಸಂಹಿತೆ ಕಲಂ 506 ರಡಿ ಅಪರಾದವೆಸಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯಿದೆ ಕಲಂ.3(2)(**va**) ರಡಿ ಆರೋಪಿತನಾದ ನೀವು ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

**ದಿನಾಂಕಃ 16.12.2025**

(ಕಾಂತರಾಜು ಎಸ್.ವಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಬಳ್ಳಾಪುರ

## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,

## ಚಿಕ್ಕಬಳ್ಳಾಪುರ

ವಿಶೇಷ ಸೆಷನ್‌ಸ್ ಕೇಸ್ 30/2025

ಆರೋಪಿಯ ಹೆಸರು - ಜಯಸುಧಾ

ತಂದೆಯ ಹೆಸರು - ಲೇಟ್ ಪಾಳ್ಯಂ ವೆಂಕಟರಾಯಪ್ಪ

ಪ್ರಾಯ - 35 ವರ್ಷ,

ವಾಸಸ್ಥಾನ - ಗುಮ್ಮನಾಯಕನಹಳ್ಳಿ , ಬಾಗೇಪಲ್ಲಿ ತಾಲ್ಲೂಕು
ಚಿಕ್ಕಬಳ್ಳಾಪುರ ಜಿಲ್ಲೆ

ಆರೋಪಿಯ ಹೇಳಿಕೆ

ಪ್ರ.ನಂಬ್ರ 1 -ಈಗ ಓದಿ ಹೇಳಿ ವಿವರಿಸಿದ ಪ್ರಕರಣದಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳ ದೋಷಾರೋಪಣೆಯನ್ನು ಕೇಳಿರುವಿರಲ್ಲವೇ?

ಉತ್ತರ -

ಪ್ರ.ನಂಬ್ರ 1 -ದೋಷಾರೋಪಣೆಯಲ್ಲಿನ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗ ಬೇಕೆನ್ನುವಿರಾ?

ಉತ್ತರ -

ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ, ವಿವರಿಸಿ, ಆರೋಪಿಯು ನೀಡಿದ ಉತ್ತರವನ್ನು ನಾನು ಸರಿಯಾಗಿ ಕೇಳಿ ಬರೆದಿರುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ **16.12.2025**

**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ